# ಸಪ್ನೋಂ ಕೆ ರಾಜಾ

43ನೇ ಪುಟದಿಂದ

71ರಲ್ಲೇ ತೆರೆಗೆ ಬಂದ 'ಆನಂದ್' ಚಿತ್ರದಲ್ಲಿ ರಾಜೇಶ್ ಖನ್ನಾನ ಜತೆಗೆ ಅಮಿತಾಭ್ ಬಚ್ಚನ್ ಸಾಥಿ. ಟೈಟಲ್ ರೋಲ್‌ನಲ್ಲಿ ಕಾಕಾನದ್ದು ಕ್ಯಾನ್ಸರ್ ಉಲ್ಬಣಿಸಿದ ವ್ಯಕ್ತಿಯ ಪಾತ್ರ. ಅಮಿತಾಭ್ ಆತನಿಗೆ ಚಿಕಿತ್ಸೆ ನೀಡುವ ವೈದ್ಯ. 'ಆನಂದ್' ಯಾವ ಪರಿ ಯಶಸ್ಸು ಕಂಡಿತೆಂದರೆ, ಅಲ್ಲಿಂದೀಚೆಗೆ ಭಾರತೀಯ ಬೆಳ್ಳಿತೆರೆಯಲ್ಲಿ ಕ್ಯಾನ್ಸರ್ ಪೀಡಿತ ಹೀರೋ ಇರುವ ಸಿನಿಮಾಗಳು ಒಂದೇ ಸಮನೆ ತೆರೆಗೆ ಬಂದವು. ಕಾಕಾನ ವೃತ್ತಿಜೀವನದಲ್ಲೇ ಅತ್ಯುತ್ತಮ ಪಾತ್ರವದು ಎಂದು ವಿಮರ್ಶಕರು ಬರೆದರು.

1972ರಲ್ಲಿ ಬಂದ 'ಅಮರ ಪ್ರೇಮ್' ಇವತ್ತಿಗೂ ರಾಜೇಶ್ ಖನ್ನಾನನ್ನು ಪ್ರೇಕ್ಷಕರು ಹನಿಗಣ್ಣಾಗಿ ನೆನಪಿಸಿಕೊಳ್ಳುವ ಚಿತ್ರ. ವೇಶ್ಯೆಯ ಪಾತ್ರಧಾರಿ ಶರ್ಮಿಳಾ ಠಾಗೋರ್ ಮುಂದೆ ಗದ್ಗದ ಕಂಠದ ರಾಜೇಶ್ ಖನ್ನಾ 'ಪುಷ್ಪಾ.. ಐ ಹೇಟ್ ಟಿಯರ್ಸ್' ಎಂಬ ಖಡಕ್ ಡೈಲಾಗನ್ನು ಈಗ 70ರ ಅಂಚಿನಲ್ಲಿರುವ ವಯೋವೃದ್ಧರೂ ಉಮೇದಿನಿಂದ ನೆನಪಿಸಿಕೊಳ್ಳುತ್ತಾರೆ.

ಬರೆಯುತ್ತಾ ಹೋದರೆ ಪಟ್ಟಿ ಇನ್ನಷ್ಟು ಉದ್ದವಿದೆ. ನಟಿಸಿದ 160 ಚಿತ್ರಗಳಲ್ಲಿ, 106ರಲ್ಲಿ ರಾಜೇಶ್ ಖನ್ನಾ ಒಬ್ಬನೇ ಹೀರೊ. ರಾಜೇಶ್ ಖನ್ನಾನ ಸಿನಿಮಾ ಬಿಡುಗಡೆಯಾಯಿತೆಂದರೆ ಸಂಗೀತ ಪ್ರೇಮಿಗಳಿಗಂತೂ ರೋಮಾಂಚನ. ರಾಜೇಶ್ ಖನ್ನಾ– ಆನಂದ್ ಬಕ್ಷಿ– ಕಿಶೋರ್ ಕುಮಾರ್ – ಆರ್.ಡಿ. ಬರ್ಮನ್ ಎಂಬ ನಾಲ್ವರ 'ಡೆಡ್ಲೀ ಕಾಂಬಿನೇಶನ್'ನ, ಹಲವು ಹಾಡುಗಳಂತೂ ಹೊಸ ಇತಿಹಾಸ ಸೃಷ್ಟಿಸಿದವು. ಇವತ್ತಿಗೂ ಈ ಹಾಡುಗಳು ರೇಡಿಯೋ ಕೇಳುಗರ ಅಚ್ಚುಮೆಚ್ಚಿನ ಆಯ್ಕೆ. 'ಮೇರೆ ಜೀವನ್ ಸಾಥಿ'ಯ.. ಓ ಮೇರೆ ದಿಲ್ ಕೆ ಚೇನ್, 'ಆಪ್ ಕಿ ಕಸಮ್'ನ.. ಜೈ ಜೈ ಶಿವಶಂಕರ್, 'ಅಮರ್ ಪ್ರೇಮ್'ನ.. ಚಿಂಗಾರಿ ಕೋಯಿ ಬಡ್ಕೆ, 'ಅಂದಾಜ್'ನ... ಜಿಂದಗಿ ಏಕ್ ಸಫರ್– ಹೀಗೆ ಸಂಗೀತ ಪ್ರೇಮಿಗಳನ್ನು ಹುಚ್ಚೆಬ್ಬಿಸಿದ ಹಾಡುಗಳು ಸಾಲು ಸಾಲು.

ಖ್ಯಾತಿಯ ಉತ್ತುಂಗದಲ್ಲಿದ್ದ ರಾಜೇಶ್ ಖನ್ನಾ, ಒಮ್ಮೆ ಬೇಡಿಕೆ ಇಳಿಮುಖವಾದ ನಂತರ ಅಂತರ್ಮುಖಿಯಾಗುತ್ತಲೇ ಹೋದರು ಎನ್ನುತ್ತಾರೆ ಅವರನ್ನು ಬಲ್ಲವರು. ವೈಯಕ್ತಿಕ ಜೀವನದಲ್ಲೂ ಇದರ ಹೊಡೆತ ಬಿತ್ತು. ಹೊಸ ಹೀರೋಗಳು ಬಂದಂತೆ ಬದಿಗೆ ಸರಿಯಲು ಕಾಕಾ ಸಿದ್ಧರಿರಲಿಲ್ಲ. ಹಾಗಾಗಿ ಸ್ವಂತ ಇಚ್ಛೆಯಿಂದಲೇ ಚಿತ್ರರಂಗದಿಂದ ದೂರವಾದರು. ಸಿನಿಮಾ ಸಮಾರಂಭಗಳಲ್ಲೂ ಕಾಣಿಸಿಕೊಳ್ಳಲಿಲ್ಲ. ಈ ಮಧ್ಯೆ ವೈಯಕ್ತಿಕ ಜೀವನದ ಏರಿಳಿತಗಳು, ಪ್ರೇಮ ಪ್ರಕರಣಗಳೂ ಕಂಗೆಡಿಸಿದವು. ಖ್ಯಾತಿಯ ಕರಗುವಿಕೆಯನ್ನು ಸಹಿಸಲಾಗದೆ ಬಾಟಲಿಗಳಲ್ಲಿ ಕರಗಿತೊಡಗಿದ 'ಸೂಪರ್ ಹೀರೋ'ನನ್ನು ಜನ ಮರೆತೇ ಬಿಡುವ ಪರಿಸ್ಥಿತಿ ಬಂತು. ಕುಡಿತ ಎಷ್ಟು ಗಾಢವಾಯಿತೆಂದರೆ ತೀರಾ ಹತ್ತಿರವಾಗಿದ್ದ ಪತ್ನಿ ಡಿಂಪಲ್ ಕೂಡಾ ದೂರವಾದರು.

ರಾಜೇಶ್ ಖನ್ನಾರ ವೈಯಕ್ತಿಕ ಪ್ರೇಮಪ್ರಕರಣಗಳ ಬಗ್ಗೆಯೂ ಹಲವು ಕಥೆಗಳಿವೆ. ಅವರ ಮೊದಲ ಪ್ರೀತಿ ಪತ್ರಕರ್ತೆ ದೇವಯಾನಿ ಚೌಬಲ್. ಆಕೆ ಸಾಯುವವರೆಗೂ ಇಬ್ಬರ ನಡುವಣ ಗಾಢ ಪ್ರೀತಿ ಮತ್ತು ಜಗಳಗಳ ಮುಂದುವರಿದೇ ಇತ್ತು. ಅವರಿಬ್ಬರ ಪ್ರೀತಿಯ ಮಧ್ಯೆ ಬಂದಾಕೆ ಅಂಜು ಮಹೇಂದ್ರ. ಅಂಜುವಿನಿಂದಾಗಿಯೇ ದೇವಿ ದೂರವಾದದ್ದೆಂಬ ಕಥೆಯೂ ಇದೆ. ಆ ಬಳಿಕ ನಡೆದದ್ದು 'ಬಾಬ್ಬಿ' ಚಿತ್ರದ ಸೆನ್ಸೇಷನಲ್ ನಾಯಕಿ ಡಿಂಪಲ್ ಕಪಾಡಿಯಾ ಜತೆಗಿನ ಮದುವೆ. ಪತ್ರಕರ್ತರೆಲ್ಲ ಗಾಢ ನಿದ್ರೆಯಲ್ಲಿದ್ದಾಗ ಮಧ್ಯರಾತ್ರಿ ಇವರಿಬ್ಬರ ಮದುವೆ ನಡೆದದ್ದು ಆ ಕಾಲದ ರೋಚಕ ಸುದ್ದಿಗಳಲ್ಲೊಂದು. ಇವರಿಬ್ಬರ ಸಂಸಾರ ಸುಖವಾಗಿರುವಾಗಲೇ ಕಾಕಾಜೀ ಟೀನಾ ಮುನಿಮ್ ಮೋಹಕ್ಕೆ ಬಿದ್ದರಂತೆ. ಡಿಂಪಲ್ ಜತೆಗಿನ ವಿಚ್ಛೇದನ ಯತ್ನಕ್ಕೂ ಈ ಮೋಹ ಕಾರಣವಾಯಿತಂತೆ. ವಿಚ್ಛೇದನ ಪಡೆಯದಿದ್ದರೂ ದೂರವಾಗಿ ಬದುಕಿದ ಈ ಇಬ್ಬರೂ ಕೊನೆಗಾಲದಲ್ಲಿ ಒಟ್ಟಿಗೇ ಇದ್ದದ್ದು ಮಕ್ಕಳಿಗೆ (ಟ್ವಿಂಕಲ್ ಮತ್ತು ರಿಂಕಿ ಖನ್ನಾ) ಸಮಾಧಾನ ತಂದ ಅಂಶ.

'ಆನಂದ್' ಸಿನಿಮಾದ ಜನಪ್ರಿಯ ಡೈಲಾಗ್– 'ಜಿಂದಗೀ ಔರ್ ಮೌತ್ ಊಪರ್‌ವಾಲೇ ಕಿ ಹಾತ್ ಮೈ ಹೈ ಜಹಾಂಪನಾ..!' ಎನ್ನುವುದು ಕಾಕಾನಿಗೂ ಗೊತ್ತಿದ್ದ ಸತ್ಯ. ಅಪಾರ ಜನಪ್ರಿಯತೆ, ಬೆನ್ನಟ್ಟಿದ ಕೀರ್ತಿ, ಬದುಕಿನುದ್ದಕ್ಕೂ ಖರ್ಚಾಗಿ ಮಿಗುವಷ್ಟು ಹಣ, ಗಾಢವಾಗಿ ಪ್ರೀತಿಸುವ ಹುಡುಗಿಯರು, ಹೆಂಡತಿಯರು, ಮಕ್ಕಳು, ಕುಟುಂಬ ಎಲ್ಲವೂ ಇದ್ದು ಕಾಕಾ ಮಧ್ಯವಯಸ್ಸಿನ ಬಳಿಕ ಒಳಗಿಂದೊಳಗೇ ಒಬ್ಬಂಟಿತನದಿಂದ ನರಳಿದ್ದು ಏಕೆಂಬ ಪ್ರಶ್ನೆಗೆ ಇವತ್ತಿಗೂ ಉತ್ತರ ಸಿಕ್ಕಿಲ್ಲ.

ಬಿಳಿಯ ಜುಬ್ಬಾ (ಗುರು ಶರ್ಟ್), ಹಾಡಿನ ನಡುವೆ ಹತ್ತಿಪ್ಪತ್ತು ಸಲ ವಾಲುವ ತಲೆ, ಆಕರ್ಷಕ ಕಣ್ಣುಗಳು, ಮನಸೆಳೆವ ಮುಗುಳ್ನಗೆ– ಮಧ್ಯಮದೇಹಿ ಕಾಕಾನನ್ನು ಹಿಂದೀ ಚಿತ್ರರಂಗದ ಆರಾಧ್ಯನನ್ನಾಗಿಸಿದ್ದು ಸುಳ್ಳಲ್ಲ. ನಟನೆ ಮತ್ತು ಅದಕ್ಕಿಂತಲೂ ಹೆಚ್ಚಾಗಿ ತನ್ನದೇ ಆದ ಸ್ಟೈಲ್ ಮೂಲಕ ಯುವಜನರನ್ನು ಹುಚ್ಚೆಬ್ಬಿಸಿದ ಕಾಕಾ, ಕುಡಿತದ ದಾಸನಾದ ಬಳಿಕ ಆರೋಗ್ಯ ಪದೇ ಪದೇ ಕೈಕೊಡುತ್ತಿತ್ತು. 69ರ ಹರೆಯದ ಕಾಕಾ ಸತ್ತ ಬಳಿಕ, ಅದಕ್ಕೆ ಕಾರಣ ಹೇಳಲು ವೈದ್ಯರೂ ನಿರಾಕರಿಸಿದರು!

ಅದೇನೇ ಇದ್ದರೂ, ಈಗ ಭಾರತೀಯ ಮನರಂಜನೆಯ ಲೋಕದ ಅಪೂರ್ವ ಜನಾನುರಾಗಿ ರಾಗತಂತುವೊಂದು ಕಡಿದುಬಿದ್ದಿದೆ ಎನ್ನುವುದಂತೂ ನಿಜ. 'ಸಪ್ನೋಂ ಕೆ ರಾಜಾ' ಇನ್ನು ಸ್ವಪ್ನಗಳಲ್ಲಿ ಮಾತ್ರ!


ಫರೀದಾ ಜಲಾಲ್ ಜತೆಗೆ